**ದಿನಾಂಕಃ 03–02–2024 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು ಆರೋಪಿಪರ ವಕೀಲರಾದ ಶ್ರೀ ಎನ್ ವಿ ಎನ್ ವಕೀಲರಿಂದಃ–**

6. ಪಂಚನಾಮಯನ್ನು ಈ ಪ್ರಕಾರ ಬರೆಯಬೇಕು ಎಂದು ನಾನು ಪೋಲಿಸರಿಗೆ ಹೇಳಿಲ್ಲ. ಪಂಚನಾಮೆಗಳನಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ನಾವು ಪಂಚನಾಮೆ ಸಮಯದಲ್ಲಿ ಏನು ನೋಡಿದೆವೋ ಅದನ್ನೆ ಲಿಖಿತವಾಗಿ ಅದರಲ್ಲಿ ಬರೆದಿದ್ದಾರೆ. ಪಂಚನಾಮೆಯನ್ನು ಆರಕ್ಷಕ ಉಪಾಧೀಕ್ಷಕರು ಹೇಳಿ ಬರೆಸಿದರು. ಪಂಚನಾಮೆಯನ್ನು ಪೊಲೀಸ್ ಸಿಬ್ಬಂದಿ ಬರೆದರು ಅವರ ಹೆಸರು ನನಗೆ ನೆನಪಿಲ್ಲ. ನಾನು ಪಿಯುಸಿವರೆಗೆ ಓದಿದ್ದೇನೆ. ಪಿಲಾಪ್ತಲಿನ್ ಪುಡಿ ಮತ್ತು ಸೋಡಿಯ ಕಾರ್ಬೋನೆಟ್ ಪುಡಿ ಎಂದರೆ ಏನು ಎಂದು ನನಗೆ ಸಮಗ್ರವಾಗಿ ಗೊತ್ತಿದೆಯಾ ಎಂದರೆ ನನಗೆ ರಾಯಸಾನಿಕ ಶಾಸ್ತ್ರ ಗೊತ್ತಿಲ್ಲ. ಪಂಚ 1 ರವರು ನೋಟುಗಳ ಸಂಖ್ಯೆಗಳನ್ನು ಬರೆದುಕೊಂಡರು ನಾನು ಅದನ್ನು ಬರೆದಿರುವುದಿಲ್ಲ. ಪ್ರಾಯೋಗಿಕ ಪಂಚನಾಮೆಯ ಸಮಯದಲ್ಲಿ ಬರೆದುಕೊಂಡ ನೋಟುಗಳ ಸಂಖ್ಯೆ ನನಗೆ ನೆನಪು ಇರಲಿಲ್ಲ ಎಂದರೆ ಹೌದು. ಪ್ರಾಯೋಗಿಕ ಪಂಚನಾಮೆಯ ಸಮಯದಲ್ಲಿ ಲಕೋಟೆಯಲ್ಲಿ ಹಣ ಇರಿಸಿದ್ದನ್ನು ಬರೆದಿದ್ದಾರೆ . ಆ ಲಕೋಟೆ ಯಾವ ಬಣ್ಣದು ಎಂದು ಖಡಾಕಂಡಿತವಾಗಿ ಹೇಳಲು ಆಗುವುದಿಲ್ಲ ಅದು Brown ಬಣ್ಣದ್ದಾಗಿದೆ. Brown ಎಂದು ನಾನು ಹೇಳಿರುವುದು ಖಡಾಕಂಡಿತ ಉತ್ತರ ಅಲ್ಲಾ ಎಂದರೆ ಶೇಖಡಾ 99 ಅದೇ ಇರುತ್ತದೆ ಶೇಕಡಾ 1 ಹೇಳಲಾಗುವುದಿಲ್ಲ. ಆ ಲಕೋಟೆಗೆ ಅಂಟನ್ನು ಹಾಕಿ ಮುಚ್ಚಿದ್ದರು. ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ಹಣ ಇಟ್ಟಿದ್ದ ಲಕೋಟೆಯನ್ನು ಪೋಲಿಸರು ವಶಪಡಿಸಿಕೊಂಡರು. ಆ ರೀತಿ ಲಕೋಟೆಯನ್ನು ವಶಪಡಿಸಿಕೊಂಡಿದ್ದನ್ನು ಟ್ರಾಪ್ ಪಂಚನಾಮೆಯಲ್ಲಿ ಬರೆದಿದ್ದಾರೆ . ಆ ಲಕೋಟೆಯನ್ನು ಕುಮಟಾ ನಿರೀಕ್ಷಣಾ ಮಂದಿರದಲ್ಲಿ ವಶಪಡಿಸಿಕೊಂಡರು. ಅಲ್ಲಿ ಅದನ್ನು ವಶಪಡಿಸಿಕೊಂಡ ಬಗ್ಗೆ ಆ ಪಂಚನಾಮೆಯಲ್ಲಿ ಬರೆದಿದ್ದಾರೆ . ಅದನ್ನು ವಶಪಡಿಸಿಕೊಂಡಾಗ ಆ ಲಕೋಟೆ ಯಾರ ತಾಬಾದಲ್ಲಿ ಇತ್ತು ಎಂದು ನಾನು ಅಷ್ಟು ಲಕ್ಷ್ಯ ಕೊಟ್ಟಿಲ್ಲ. ಪಂಚ 1 ರವರ ಕೈಗಳನ್ನು ಅದ್ದಿದ ಧ್ರಾವಣ ಯಾವ ರಾಸಾಯನಿಕ ಧ್ರಾವಣ ಎಂದು ಹೇಳಲು ಆಗುವುದಿಲ್ಲ. ಪಂಚ 1 ರವರ ಕೈ ತೊಳೆದಾಗ ತಿಳಿ ಗುಲಾಬಿ ಬಣ್ಣ ಬಂದ ಧ್ರಾವಣವನ್ನು ಒಂದು ಬಾಟಲಿಯಲಿ ಮಾತ್ರ ಸಂಗ್ರಹಿಸಿದರು. ಯಾವುದೇ ಪ್ರಾಯೋಗಿಕ ಪಂಚನಾಮೆ ಮತ್ತು

ರಾಸಾಯನಿಕ ಪ್ರಯೋಗವನ್ನು ನನ್ನ ಮುಂದೆ ಮಾಡಿಲ್ಲ ಎಂದರೆ ಸರಿಯಲ್ಲ. ಪಂಚ 1 ರವರ ಕೈ ಗಳನ್ನು ಅದ್ದಿದಾಗ ಗುಲಾಬಿ ಬಣ್ಣ ಬಂತು ಎಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ಮಧ್ಯಾಹ್ನ ಸುಮಾರು 3.30-4 ಗಂಟೆಗೆ ಕುಮಟಾಗೆ ಹೋಗಲು ಕಾರವಾರದಿಂದ ಹೊರಟೆವು. ಪಿರ್ಯಾದುದಾರ ರಾಮ ನಾಯ್ಕ ನಮಗೆ ಕುಮಟಾದ ತಾಲೂಕು ಕಛೇರಿಯಲ್ಲಿ ಸಿಕ್ಕಿದ್ದ. ಅವನು ಯಾವ ವಾಹನದಲ್ಲಿ ಅಲ್ಲಿಗೆ ಬಂದ ಎಂದು ಗೊತ್ತಿಲ್ಲ. ಕಾರವಾರದಿಂದ ನಾವು ಹೊರಟಾಗ ಪೋಲಿಸನವರು ಪಿರ್ಯಾದಿಗೆ ನಾವು ಹೊರಡುತ್ತಿದ್ದೆವೆ ಎಂದು ದೂರವಾಣಿ ಕರೆ ಮಾಡಿ ಹೇಳಿದ್ದರಾ ಎಂದರೆ ನನಗೆ ತಿಳಿದ ಹಾಗೆ ಆ ರೀತಿ ಹೇಳಿಲ್ಲ. ಕುಮಟಾದಲ್ಲಿ ಪಿರ್ಯಾದಿಯನ್ನು ಪ್ರಥಮ ಬಾರಿಗೆ ನಾನು ಎಲ್ಲಿ ನೋಡಿದೆ ಎಂದರೆ ಪಿರ್ಯಾದಿ ರಾಮ ನಾಯ್ಕ ನಮ್ಮ ಜೊತೆ ಇನ್ನೊಂದು ವಾಹನದಲ್ಲಿ ಕಾರವಾರದಿಂದ ಅಲ್ಲಿಗೆ ಬಂದ. ಆರೋಪಿಯನ್ನು ನಾನು ಮೊದಲ ಬಾರಿಗೆ ಕುಮಟಾದಲ್ಲಿ ದೇವಸ್ಥಾನದ ಹತ್ತಿರ ನೋಡಿದೆ. ಆ ದೇವಸ್ಥಾನದ ಹೆಸರು ಸರಿಯಾಗಿ ಗೊತ್ತಿಲ್ಲ. ಆ ದೇವಸ್ಥಾನ ಆರೋಪಿಯ ಕಛೇರಿಯಿಂದ ಸುವಾರು ಅರ್ಧ ಮುಕ್ಕಾಲು ಕಿ.ಮಿ ದೂರ ಆಗುತ್ತದೆ. ಕುಮಟಾದಲ್ಲಿ ನಾವು ಜೀಪ ನಿಲ್ಲಿಸಿದ ಸ್ಥಳದಿಂದ 15-20 ಮೀಟರ್ ದೂರದಲ್ಲಿ ಆರೋಪಿಯ ಕಚೇರಿ ಇತ್ತು ಅಲ್ಲಿ ಒಂದು ವೃತ್ತ ಇತ್ತು ಅದನ್ನು ದಾಟಿದ ಬಳಿಕ ಆರೋಪಿ ಕಚೇರಿ ಇತ್ತು. ಲೋಕಾಯುಕ್ತ ಕಚೇರಿಯಲ್ಲಿ ನಾನು ಹೇಳಿದ Brown ಲಕೋಟೆಗೆ ಯಾವುದೇ ಪುಡಿ ಹಚ್ಚಲಿಲ್ಲ. ಆರೋಪಿ ಕಿಸೆಯಿಂದ ಹಣವನ್ನು ಎಸೆದಾಗ ಲಕೋಟೆಯನ್ನು ಎಸೆದಿರುವುದಿಲ್ಲ. ಆರೋಪಿ ಹಣವನ್ನು ಮಾತ್ರ ಎಸೆದ. ತಾಲೂಕು ಕಚೇರಿಯಿಂದ ನಾವು ಹೊರಟ ಮೇಲೆ 5-10 ನಿಮಿಷದಲ್ಲಿ ಆರೋಪಿ ದೇವಸ್ಥಾನದ ಹತ್ತಿರ ಕಾಣಿಸಿದ. ತಾಲೂಕು ಕಚೇರಿ ಹತ್ತಿರದಿಂದ ಆರೋಪಿಯನ್ನು ಹಿಂಬಾಲಿಸಲು ನಾವು ಬಿಟ್ಟಾಗ ರಾತ್ರಿ ಸುಮಾರು 7.30-8 ಗಂಟೆಗೆ ಸಮಯ ಆಗಿತ್ತು. ನನಗೆ ಸಮಯದ ಪ್ರಜ್ಞೆ ಸರಿಯಾಗಿದೆ ನನಗೆ ಸಮಯ ನೋಡಲು ಬರುತ್ತದೆ. ನನ್ನ ಬಳಿ ಆಗ ಸಮಯ ನೋಡಲು ಮೊಬೈಲ್ ಇತ್ತು. ಈಗ 1.10 ನಿಮಿಷ ಸಮಯ ಆಗಿದೆ ಎಂದರೆ ಹೌದು. ತಾಲೂಕು ಕಚೇರಿ ಹತ್ತಿರದಿಂದ ಬಿಟ್ಟ ಮೇಲೆ 5 ರಿಂದ 10 ನಿಮಿಷದಲ್ಲಿ ಆ ದೇವಸ್ಥಾನ ತಲುಪಿದೆವು . ಕಾರವಾರದಿಂದ ಬಿಟ್ಟ ಮೇಲೆ ಸಂಜೆ 6.30 ಗಂಟೆಗೆ ಕುಮಟಾ ತಲುಪಿದೆವು. ಆ ದೇವಸ್ಥಾನದ ಬಳಿ ಸುಮಾರು 15 ನಿಮಿಷದಿಂದ ಅರ್ಧ ಗಂಟೆ ಇದ್ದೆವು. ಅಲ್ಲಿಂದ ಪ್ರವಾಸಿ ಮಂದಿರಕ್ಕೆ ಎಷ್ಟು ದೂರ ಇದೆ ಎಂದು

ನನಗೆ ದೂರ ಹೇಳಲು ಆಗುವುದಿಲ್ಲ, ಅಲ್ಲಿಗೆ ತಲುಪಲು 15-20 ನಿಮಿಷ ಆಯಿತು. ದೇವಸ್ಥಾನದ ಹತ್ತಿರ ಸುಮಾರು 15 ರಿಂದ 20 ಜನ ಇದ್ದರು. ಅವರ ಸಹಿಗಳನ್ನು ನನಗೆ ತಿಳಿದ ಹಾಗೆ ಲೋಕಾಯುಕ್ತ ಪೋಲಿಸರು ಪಡೆದಿರುವುದಿಲ್ಲ. ಪಿರ್ಯಾದಿ ರಾಮ ನಾಯ್ಕ ಆರಕ್ಷಕರ ವಾಹನದಲ್ಲಿ ತಾಲೂಕು ಕಚೇರಿಯಿಂದ ದೇವಸ್ಥಾನದ ಬಳಿ ಬಂದಿದ್ದ . ನಾನು ಮತ್ತು ಇನ್ನೊಬ್ಬ ಪಂಚ ಮತ್ತೊಂದು ವಾಹನದಲ್ಲಿ ಇದ್ದೆವು. ಪ್ರವಾಸಿ ಮಂದಿರದಲ್ಲಿ ನಾಲ್ಕೈದು ತಾಸು ಇದ್ದೆವು ಅಲ್ಲಿ ತಡ ಆಯಿತು. ಟ್ರಾಪ್ ಪಂಚನಾಮೆಯನ್ನು ನಿರೀಕ್ಷಣಾ ಮಂದಿರದಲ್ಲಿ ಪ್ರಾರಂಭಿಸಿದರು, ಅಲ್ಲಿ ಬಹಳ ತಡ ಆಗಿದ್ದರಿಂದ ಆ ಪಂಚನಾಮೆಯನ್ನು ಕಾರವಾರಕ್ಕೆ ಲೋಕಾಯುಕ್ತ ಕಚೇರಿಗೆ ಬಂದು ಅಲ್ಲಿ ಮುಕ್ತಾಯ ಮಾಡಿದೆವು. ನಾನು ಟ್ರಾಪ್ ಪಂಚನಾಮೆಗೆ ಎಲ್ಲಿ ಸಹಿ ಮಾಡಿದೆ ಎಂದರೆ ಕುಮಟಾದ ನಿರೀಕ್ಷಣಾ ಮಂದಿರದಲ್ಲಿ ಮಾಡಿದ್ದೇನೆ ಮತ್ತು ಕಾರವಾರದ ಲೋಕಾಯುಕ್ತ ಕಚೇರಿಯಲ್ಲಿ ಸಹ ಮಾಡಿದೆನೆ. ನಾನು ಕಾರವಾರದ ಲೋಕಾಯುಕ್ತ ಕಚೇರಿಯಲ್ಲಿ ಟ್ರಾಪ್ ಪಂಚನಾಮೆಗೆ ಎಷ್ಟು ಸಹಿ ಮಾಡಿದೆ ಎಂದು ನನಗೆ ಲಕ್ಷ್ಯ ವಿಲ್ಲ. ಆರೋಪಿ ಪಿರ್ಯಾದುದಾರನಿಂದ ಲಂಚ ಸ್ವೀಕರಿಸಿರುವುದನ್ನು ನಾನು ಕಣ್ಣಾರೇ ನೋಡಿಲ್ಲ. ಆರೋಪಿಯ ತಾಬೆಯಿಂದ ಯಾವುದೇ ನೋಟುಗಳನ್ನು ಲೋಕಾಯುಕ್ತ ಪೋಲಿಸರು ವಶಪಡಿಸಿಕೊಂಡಿಲ್ಲ ಎಂದರೆ ಹೌದು ಅಂದರೆ ಆರೋಪಿಯ ಜೇಬಿನಿಂದ ಅಥವಾ ಅವನಿಂದ ವಶಪಡಿಸಿಕೊಂಡಿಲ್ಲ. ನನ್ನನ್ನು ಪ್ರಾಯೋಗಿಕ ಮತ್ತು ಟ್ರಾಪ ಪಂಚನಾಮೆಗೆ ಲೋಕಾಯುಕ್ತ ಪೋಲಿಸನವರು ಕೆರದಿಲ್ಲ ಎಂದರೆ ನನ್ನನ್ನು ನೇರವಾಗಿ ಕರೆದಿಲ್ಲ, ನನ್ನ ಕಚೇರಿಯಲ್ಲಿ ಅವರು ಕೇಳಿದ್ದರು ನಾನು ಕಚೇರಿಯಿಂದ ಕಳುಹಿಸಲ್ಪಟ್ಟೆ ನಾನು ಪ್ರಾಯೋಗಿಕ ಮತ್ತು ಟ್ರಾಪ ಪಂಚಾನಮೆಯಲ್ಲಿ ಭಾಗವಹಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಕುಮಟಾದ ದೇವಸ್ಥಾನದ ಹತ್ತಿರ ಸಿಕ್ಕಿಲ್ಲ ಎಂದರೆ ಸರಿಯಲ್ಲ. ಆರೋಪಿ ಕಚೇರಿ ಬಳಿ ಹೋದಾಗ 1 ನೇ ಪಂಚ ಎಲ್ಲಿ ನಿಂತಿದ್ದ ಮತ್ತು ಇತರೆ ಆರಕ್ಷಕ ಸಿಬ್ಬಂದಿ ಎಲ್ಲಿ ನಿಂತಿದ್ದರು ಎಂದು ಹೇಳಲು ಆಗುವುದಿಲ್ಲ. ದೇವಸ್ಥಾನದ ಹತ್ತಿರ ಹೋದಾಗ ಕತ್ತಲೆ ಇತ್ತು. ಆರೋಪಿ ಹಣ ಎಸೆಯುವುದನ್ನು ನಾನು ಕಣ್ಣಾರೆ ನೋಡಿಲ್ಲ. ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಆರೋಪಿ ಅದನ್ನು ಅಲ್ಲಿ ಎಸೆದಿದ್ದ. ಆ ನೋಟುಗಳನ್ನು ಪಂಚ 1 ರವರ ಕಡೆಯಿಂದ ಪೋಲಿಸನವರು ಎತ್ತಿಸಿದರು ಎಂದು ನಾನು ಸುಳ್ಳು ಹೇಳಿದ್ದೆನೆ ಎಂದರೆ ಸರಿಯಲ್ಲ. ಅಲ್ಲಿ ಕತ್ತಲೆ ಇದ್ದ ಕಾರಣ ಯಾರು ಏನು ಮಾಡುತ್ತಿದ್ದರು

ಎಂದು ಕಾಣುತ್ತಿರಲಿಲ್ಲ ಎಂದರೆ ದೂರದಿಂದ ಕಾಣುತ್ತಿರಲಿಲ್ಲ ಆದರೆ ಹತ್ತಿರ ಹೋದಾಗ ಕಾಣುತ್ತಿತ್ತು. ಪಂಚ 1 ರವರು ನೋಟುಗಳ ಸಂಖ್ಯೆಗಳನ್ನು ಹಾಳೆಯಲ್ಲಿ ಬರೆದುಕೊಂಡರಾ ಎಂದರೆ ಹೌದು. ಆ ಹಾಳೆಯನ್ನು ಪೋಲಿಸರು ತೆಗೆದುಕೊಳ್ಳಲಿಲ್ಲ ಅದು ಪಂಚ 1 ರವರ ಕಡೆ ಇತ್ತು. ಕಾರವಾರದಿಂದ ಹೋಗಬೇಕಾದರೆ ಏನೆನು ವಸ್ತುಗಳನ್ನು ಪೋಲಿಸರು ತೆಗೆದುಕೊಂಡು ಹೋದರು ಎಂದು ಪಟ್ಟಿ ಮಾಡಿದರಾ ಎಂದು ಗೊತ್ತಿಲ್ಲ. ರಾಸಾಯನಿಕ ಪರೀಕ್ಷೆ ಮಾಡಲು ಮತ್ತು ಪಂಚನಾಮೆ ಮಾಡಲು ಒಂದು ತಾಸು ಸಮಯ ಸಾಕಾಗುತ್ತದೆ ಎಂದರೆ ಅದು ಹೇಗೆ ಮಾಡುತ್ತಾರೆ ಅದನ್ನು ಅವಲಂಬಿಸಿರುತ್ತದೆ.

7. ಆರೋಪಿಯ ಕಚೇರಿಯಲ್ಲಿ ಯಾರಾದರೂ ಸಿಬ್ಬಂದಿ ಇದ್ದರಾ ಎಂದು ನನಗೆ ಗೊತ್ತಿಲ್ಲ. ಪ್ರವಾಸಿ ಮಂದಿರದ ಬಳಿ ಪ್ರವಾಸಿ ಮಂದಿರದ ಸಿಬ್ಬಂದಿ ಇದ್ದರು . ಅವರು ಎಷ್ಟು ಜನ ಇದ್ದರು ಗೊತ್ತಿಲ್ಲ. ಊಟಕ್ಕೆ ಅವರೇ ವ್ಯವಸ್ಥೆ ಮಾಡಿದ್ದರು. ಅವರು ಪಂಚನಾಮೆಗೆ ಸಹಿ ಮಾಡಿದ್ದರಾ ಎಂದು ನನಗೆ ಗೊತ್ತಿಲ್ಲ. ಆರೋಪಿಯ ಕೈಯನ್ನು ರಾಸಾಯನಿಕದಲ್ಲಿ ಅದ್ದಿದ್ದನ್ನು ನಾನು ನೋಡಿಲ್ಲ ಎಂದರೆಸ ರಿಯಲ್ಲ. ನಾನು ಅದನು ನೋಡಿದೆನೆ. ಆ ರಾಸಾಯನಿಕ ದ್ರಾವಣವನ್ನು ಯಾವುದದರಿಂದ ತಯಾರಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಗೆ ಪ್ಯಾಂಟ್ ತರಿಸಿ ಅವನು ಧರಿಸಿದ ಪ್ಯಾಂಟನ್ನು ತೆಗೆಸಿ ಅದರ ಕಿಸೆಯನ್ನು ರಾಸಾಯನಿಕದಲ್ಲಿ ಅದ್ದಿದ್ದರು ಎಂದು ಸುಳ್ಳು ಹೇಳುತ್ತಿದೆನೆ ಎಂದರೆ ಸರಿಯಲ್ಲ. ಆರೋಪಿಯ ಕೈಗಳನ್ನು ಮತ್ತು ಪ್ಯಾಂಟ್ ಕಿಸೆಯನ್ನು ರಾಸಾಯನಿಕದಲ್ಲಿ ಅದ್ದಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು ಎಂದು ನಾನು ಸುಳ್ಳು ಸಾಕ್ಷ ನುಡಿಯುತ್ತಿದೆನೆ ಎಂದರೆ ಸರಿಯಲ್ಲ. ದೇವಸ್ಥಾನದ ಹತ್ತಿರದಿಂದ ಪ್ರವಾಸಿ ಮಂದಿರಕ್ಕೆ ಪಿರ್ಯಾದಿದಾರ ಹೇಗೆ ಬಂದ ಎಂದರೆ ನನಗೆ ಗೊತ್ತಿಲ್ಲ. ದೇವಸ್ಥಾನದ ಬಳಿ ನೋಟುಗಳನ್ನು ಎತ್ತಿದ ಪಂಚ 1 ಆ ನೋಟುಗಳನ್ನು ಪೋಲಿಸರಿಗೆ ಅಲ್ಲಿಯೇ ನೀಡಿದ . ಅಲ್ಲಿ ಯಾರ ಬಳಿ ನೀಡಿದ ಎಂದು ಸರಿಯಾಗಿ ಗೊತ್ತಿಲ್ಲ. ದೇವಸ್ಥಾನದ ಹತ್ತಿರ ನೋಟುಗಳನ್ನು ಎತ್ತಿದ ಪಂಚ ಮತ್ತು ಅದನ್ನು ಪಡೆದ ಪೋಲಿಸರು ಅಲ್ಲಿಯೇ ಅವರ ಕೈಗಳನ್ನು ತೊಳೆದುಕೊಂಡರಾ ಎಂದು ನನಗೆ ಗೊತ್ತಿಲ್ಲ. ಆರೋಪಿ ನಮ್ಮ ಜೀಪನಲ್ಲಿ ಪ್ರವಾಸಿ ಮಂದಿರಕ್ಕೆ ಬರಲಿಲ್ಲ ಮತ್ತೊಂದು ಜೀಪನಲ್ಲಿ ಬಂದ. ಜೀಪನಲ್ಲಿ ಪ್ರಯಾಣಿಸುವಾಗ ಒಬ್ಬರ ಮೈ ಇನ್ನೊಬ್ಬರಿಗೆ ಒಬ್ಬರ ಕೈ

ಇನ್ನೊಬ್ಬರಿಗೆ ತಾಗುವ ಸಾಧ್ಯತೆ ಇದೆ ಎಂದರೆ ಹೌದು. ಪ್ರವಾಸಿ ಮಂದಿರದಲ್ಲಿ ವಾಯ್ಸ್ ರೆಕಾರ್ಡರನ್ನು ಚಾಲು ಮಾಡಿ ಕೇಳಿದಾರಾ ಎಂದರೆ ನನಗೆ ಗೊತ್ತಿಲ್ಲ. ಪ್ರಾಯೋಗಿಕ ಪಂಚನಾಮೆಯಲ್ಲಿ ಲೋಕಾಯುಕ್ತ ಕಚೇರಿಯಲ್ಲಿ ವಾಯ್ಸ್ ರೆಕಾರ್ಡರನ್ನು ಆಲಿಸಿದಾಗ ಅದರಲ್ಲಿ ಸ್ಪಷ್ಟವಾಗಿ ಸಂಭಾಷಣೆ ಇರಲಿಲ್ಲ. ಅದು ಗುಜು ಗುಜು ಇತ್ತು. ಪೋಲಿಸರು ಸಿಡಿ ಜಪ್ತು ಮಾಡಿದರು ಎಂದು ಸುಳ್ಳು ಹೇಳಿದ್ದೆನೆ ಎಂದರೆ ಸರಿಯಲ್ಲ. ನಾನು ಸಿಡಿ ಜಪ್ತು ಮಾಡಿರುವುದನ್ನು ನೋಡಿಲ್ಲ.  ಮು.ಮಾ 7 ರಿಂದ 10 ಕ್ಕೆ ಚೀಟಿಗಳನ್ನು ಎಲ್ಲಿ ಅಂಟಿಸಿದರು ಎಂದರೆ ಲೋಕಾಯುಕ್ತ ಕಚೇರಿಯಲ್ಲಿ ಅಂಟಿಸಿದರು. ಮಾರನೇ ದಿನ ಬೆಳಿಗ್ಗೆ ಅಲ್ಲಿ ಅಂಟಿಸಿದರಾ ಎಂದರೆ ಹೌದು. ಪೋಲಿಸರು ಯಾವುದೇ ಛಾಯಾ ಚಿತ್ರ ತೆಗೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ದೇವಸ್ಥಾನದ ಬಳಿ ಬಂದಾಗ ಕಾರಿನ ಮೇಲೆ ಇದ್ದನಾ ಅಥವಾ ಬೈಕ್ ಮೇಲೆ ಇದ್ದನಾ ಎಂದರೆ ನನಗೆ ಗೊತ್ತಿಲ್ಲ.  6.00 ಗಂಟೆಗೆ ಮತ್ತು 7.30 ಗಂಟೆಗೆ ನಡುವೆ ಸಮಾರು 1.30 ಗಂಟೆ ವ್ಯತ್ಯಾಸ ಇದೆ ಎಂಬ ಸಮಯ ಪ್ರಜ್ಞೆ ನನಗೆ ಇದೆ.  ಪ್ರವಾಸಿ ಮಂದಿರದಲ್ಲಿ ಕುಮಟಾದಲ್ಲಿ ಯಾವುದೇ ಟ್ರಾಪ್ ಪಂಚನಾಮೆ ಮಾಡಿಲ್ಲ ಮತ್ತು ಬರೆದಿಟ್ಟಿದ್ದ ಪಂಚನಾಮೆಗೆ ಲೋಕಾಯುಕ್ತ ಕಚೇರಿಯಲಿ ಕಾರವಾರದಲ್ಲಿ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ.  ನಾನು ಸರ್ಕಾರಿ ನೌಕರನಾಗಿದ್ದರಿಂದ ನನಗೆ ನೌಕರಿಗೆ ತೊಂದರೆ ಆಗಬಹುದು ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದೆನೆ ಎಂದರೆ ಸರಿಯಲ್ಲ.  ನನಗೆ ಸುಳ್ಳು ಸಾಕ್ಷ್ಯ ಹೇಳಲು ಲೋಕಾಯುಕ್ತ ಪೋಲಿಸರು ಒತ್ತಡ ಹಾಕಿದ್ದಾರೆ ಎಂದರೆ ಸರಿಯಲ್ಲ.  ಯಾವುದೇ ವಸ್ತುಗಳನ್ನು ಪೋಲಿಸನವರು ವಶಪಡಿಸಿಕೊಂಡಿಲ್ಲ ಎಂದರೆ ಪ್ರವಾಸಿ ಮಂದಿರದಲ್ಲಿ ನೋಟು ಮತ್ತು ಆರೋಪಿಯ ಪರೀಕ್ಷೆಗೆ ಒಳಪ್ಪಟ್ಟ ಪ್ಯಾಂಟ್ ನ್ನು ಮಾತ್ರ ವಶಪಡಿಸಿಕೊಂಡರು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)            ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ